# ಹೊನ್ನ ಗುಣದ ಹೊನ್ನೆ



ದಟ್ಟ ಎಲೆಗಳಿಂದ ಕಂಗೊಳಿಸುವ ಹೊನ್ನೆ, ಪ್ರಾಕೃತಿಕ ಗುಣವಿಶೇಷಣಗಳನ್ನು ತುಂಬಿಕೊಂಡಿರುವ ಮರ.

■ ರಮಣ್ ಶೆಟ್ಟಿ ರೆಂಜಾಳ

ಮಂಗಳೂರಿನ ನಮ್ಮ ಹಳ್ಳಿ ಮನೆಗೆ ಇತ್ತೀಚೆಗೆ ಭೇಟಿಯಿತ್ತಾಗ ಸಹೋದರನ ಕೈತೋಟದಲ್ಲಿ ಜಂಬುನೇರಳೆ, ಪುನರ್ಪುಳಿ, ಹಲಸು, ಮಾವು, ಗೇರು, ಅನಾನಸು, ಪೇರಳೆ, ಪಪ್ಪಾಯಿ... ವಿವಿಧ ರಂಗು, ಸುವಾಸನೆಯ ಹಣ್ಣು/ಕಾಯಿಗಳಿಂದ ತೊನೆದಾಡುತ್ತಿದ್ದ ವೃಕ್ಷಗಳು ಮನಸೂರೆಗೊಂಡವು. ಆದರೆ ಮರುದಿನ ವಾನರ ಸಮೂಹವೇ ಆ ತೋಟದ ಮೇಲೆ ದಂಡೆತ್ತಿ ಬಂದು ಹಣ್ಣುಗಳೆಲ್ಲವನ್ನು ತಿಂದು ಕಾಯಿಗಳನ್ನೂ ಬಿಡದೆ ಧ್ವಂಸಗೈದು ಮರಗಳು ಬೋಳಾಗಿ ಕಾಣಿಸುವಂತೆ ಮಾಡಿದವು. ಪಪ್ಪಾಯಿಯದ್ದಂತೂ ಚಿಗುರೆಲೆಗಳನ್ನೂ ಬಿಡದೆ ಕಬಳಿಸಿದ್ದವು.

ಮಂಗಗಳ ದಾಳಿಯ ಬಗ್ಗೆ ಯೋಚಿಸುತ್ತಾ ಅಡ್ಡಾಡುತ್ತಿದ್ದಾಗ ಕಂಗಳಿಗೆ ತಂಪೂಡಿಸುವ ಹರಿದ್ವರ್ಣದ ಎಲೆಗಳಿಂದ ಹಾಗೂ ಕಾಯಿಗಳಿಂದ ತುಂಬಿ ತುಳುಕುತ್ತಿದ್ದ ಆಕರ್ಷಕ ಮರಗಿಡಗಳು ಕಾಣಿಸಿದವು. ಅವು ವಾನರ ಸೇನೆಯಿಂದ ಅಬಾಧಿತವಾಗಿ ಉಳಿದಿರುವುದನ್ನು ಕಂಡು ಆಶ್ಚರ್ಯವೆನಿಸಿತು. ಸಾಮಾನ್ಯವಾಗಿ ತೋಟಗಳಲ್ಲಿ ಅಪರೂಪವೆನಿಸುವ ಈ ಮರದ ಪರಿಚಯ ಕೇಳಿದಾಗ, ಸಹೋದರ ಅದು ಹೊನ್ನೆ ಮರವೆಂದು ತಿಳಿಸಿದ. ಅದರ ಕಾಯಿ/ಹಣ್ಣುಗಳು ತಿನ್ನಲು ಯೋಗ್ಯವಲ್ಲವಾದರೂ ಹೊನ್ನೆಯ ಬಹೂಪಯೋಗಗಳನ್ನೂ, ಅಗಾಧ ಪ್ರಾಕೃತಿಕ ಗುಣವಿಶೇಷಗಳನ್ನೂ ಹೊಂದಿವೆಯೆಂದು ವಿವರಿಸಿದ.


ಯಥಾವತ್ ಸೇವಿಸಲು ಮಾನವರಿಗೆ ಯೋಗ್ಯವಲ್ಲವಾದ್ದರಿಂದ ವಾನರರಿಗೂ ವರ್ಜ್ಯವಾಗಿ, ಅದೇ ಕಾರಣದಿಂದ ಕಾಯಿಗಳು ಸುರಕ್ಷಿತವಾಗಿ ನಳನಳಿಸುತ್ತಿದ್ದವು! (ಸ್ಥಳೀಯ ಸಸ್ಯತಜ್ಞರ ಪ್ರಕಾರ ಕೋತಿಗಳಿಗೆ ಬೇರೆ ಆಹಾರ ದೊರಕದ ಹಾಗೂ ವಿಪರೀತ ಹಸಿವಿನ ಸಂದರ್ಭದಲ್ಲಿ ನೈಸರ್ಗಿಕವಾಗಿ ದೊರಕುವ ಇಂತಹ ಎಲೆ/ಕಾಯಿಗಳನ್ನೂ ತಿನ್ನುವ ಪ್ರವೃತ್ತಿಯಿದೆ. ಆದರೆ ಕಹಿಯಾಗಿರುವುದರಿಂದ ಅವು ಮೊದಲ ಆಯ್ಕೆಯಾಗಿರುವುದಿಲ್ಲ).

ಹೊನ್ನೆ ಮರವನ್ನು ಇಂಗ್ಲಿಷ್‌ನಲ್ಲಿ 'ಕಿನೋ ಟ್ರೀ' ಎಂದು ಕರೆಯಲಾಗುತ್ತದೆ. ತುಳುವಿನಲ್ಲಿ 'ಪೊನ್ನೆದ ಮರ'ವೆಂಬ ನಾಮಧೇಯವಿದೆ. 'ಟೆರೊಕಾರ್ಪಸ್ ಮಾರ್ಸುಪಿಯಮ್' ಸಸ್ಯಶಾಸ್ತ್ರೀಯ ಹೆಸರಾಗಿದ್ದು, 'ಲೆಗುಮಿನೊಸೆ' ಕುಟುಂಬಕ್ಕೆ ಸೇರಿದೆ.

ಹರಡಿದ ಕೊಂಬೆಗಳ, ದೊಡ್ಡ ಪ್ರಮಾಣದ ಪ್ರಮುಖ ಚೌಬೀನೆ ಮರ ಇದಾಗಿದ್ದು ಪೀಠೋಪಕರಣ, ಗೃಹನಿರ್ಮಾಣದ ಕೆಲಸಗಳಿಗೆ ಹೇಳಿಮಾಡಿಸಿದಂತಿದೆ. ಸುಮಾರು 30 ಮೀಟರ್ ಎತ್ತರಕ್ಕೆ ಬೆಳೆಯಬಲ್ಲ ಈ ಸಸ್ಯದ ಕಾಂಡದ ವ್ಯಾಸ 3 ಅಡಿಗಳಷ್ಟಿರುತ್ತದೆ.

ಬೂದುಬಣ್ಣದ ದಪ್ಪ ತೊಗಟೆ ಕೆತ್ತಿದಾಗ ರಕ್ತ ಕೆಂಪಿನ ಅಂಟು ಒಸರುತ್ತದೆ. ಇದರ ಹಳದಿ ಮಿಶ್ರಿತ ಕಂದು ಬಣ್ಣದ ದಾರುವು ಗಡುಸಾಗಿದ್ದು ತುಂಬಾ ಬಾಳಿಕೆ ಬರುತ್ತದೆ. ಮಾತ್ರವಲ್ಲದೆ ಮರಗೆಲಸಗಳ ಕೊಯ್ತಕ್ಕೆ ಸುಲಭವಾಗಿದೆ. ಇದೇ ಕಾರಣಕ್ಕೆ ಗೃಹನಿರ್ಮಾಣ, ದೋಣಿ ತಯಾರಿಕೆ, ಪೀಠೋಪಕರಣ, ಗಾಡಿಚಕ್ರ, ರೈಲ್ವೆ ಕೋಚು/ಸ್ಲೀಪರುಗಳು, ಕೊಳಗಗಳು, ವ್ಯವಸಾಯದ ಉಪಕರಣಗಳು ಹಾಗೂ ಕೆತ್ತನೆ ಕೆಲಸಗಳಿಗೆ ಬಲು ಉಪಯುಕ್ತವಾಗಿದೆ.

ದಕ್ಷಿಣ ಭಾರತದಲ್ಲಿ ಸಾಗುವಾನಿ ಮತ್ತು ಬೀಟೆಯ ನಂತರ ಅತಿ ಬಳಕೆಯಲ್ಲಿದ್ದು ಅಷ್ಟು ದುಬಾರಿಯಲ್ಲವಾದ್ದರಿಂದ 'ಹೊನ್ನ ಗುಣದ ಹೊನ್ನೆ' ಎಂಬ ಹೆಗ್ಗಳಿಕೆ ಪಡೆದಿದೆ. ತುಂಡರಿಸಿದ ದಾರುವಿನ ಮೇಲೆ ನೀರು ಬಿದ್ದಲ್ಲಿ ಕಪ್ಪು ಬಣ್ಣದ ಕಲೆಯುಂಟಾಗುವುದರಿಂದ ನಿರಂತರ ನೀರಿನ ಸಂಪರ್ಕವಿರುವಲ್ಲಿ ಈ ಮರದ ಬಳಕೆ ಸೂಕ್ತವಲ್ಲ!



ತೊಗಟೆಯ ಅಂಟು ಆಯುರ್ವೇದ ಔಷಧ ಹಾಗೂ ಬಣ್ಣಗಳ ತಯಾರಿಕೆಯಲ್ಲಿ ಉಪಯೋಗವಾಗುತ್ತದೆ. ಎಲೆಗಳು ಹೈನುಗಾರಿಕೆಯ ಗೊಬ್ಬರಕ್ಕೆ ಸೂಕ್ತವೆನಿಸಿವೆ. ಸುಮಾರು 1ರಿಂದ 1.5 ಇಂಚು ವ್ಯಾಸದ ಗೋಲಾಕಾರದ ಕಂದು ಕಾಯಿಯ ಮಾಂಸಲ ಪದರದೊಳಗೆ ಗಟ್ಟಿ ಕವಚವಿದೆ. ಅದನ್ನೊಡೆದರೆ ಒಳಗೆ ಬಿಳಿ ತಿರುಳಿನ ಬೀಜ ಲಭಿಸುತ್ತದೆ. ಒಣಗಿಸಿದ ಬಳಿಕ ಈ ಬೀಜಗಳಿಂದ ಕಪ್ಪಾದ ಎಣ್ಣೆ ತೆಗೆಯುತ್ತಾರೆ ಮತ್ತು ಅದನ್ನು ನೆಲ, ಗೋಡೆ, ಮರದ ಸಾಮಾನುಗಳ ಬಾಳಿಕೆಗಾಗಿ ಟಾರ್ ಬದಲಿಗೆ ಬಳಿಯಲು ಉಪಯೋಗಿಸುತ್ತಾರೆ. ಮರದ ಗಟ್ಟಿ ತಿರುಳಿನಿಂದ ಪಾತ್ರೆ ಮಾಡಿ ಅದರಲ್ಲಿ ಸಂಗ್ರಹಿಸಿದ ನೀರು ಸೇವಿಸುವುದರಿಂದ ಮಧುಮೇಹ ನಿಯಂತ್ರಣಕ್ಕೆ ಬರುತ್ತದೆ ಎಂಬ ನಂಬಿಕೆ ಗ್ರಾಮೀಣ ಪ್ರದೇಶಗಳಲ್ಲಿದೆ.

ಅಸ್ಟ್ರೇಲಿಯಾ ಹಾಗೂ ಭಾರತ ಪರ್ಯಾಯ ದ್ವೀಪ ಮೂಲದ ಈ ಮರವು ತೇವಮಯ ಪ್ರದೇಶಗಳಲ್ಲಿ ಬೆಳೆಯುತ್ತದೆ. ಇದರ ಬೀಜ ಬಿತ್ತಿ ಸಸಿ ಬೆಳೆಸಬಹುದು. ಬೆಳೆದು ಬಲಿತ ಬಳಿಕ ಏಪ್ರಿಲ್–ಮೇ ತಿಂಗಳುಗಳಲ್ಲಿ ಕೆಲವು ಕಾಲ ಎಲೆಗಳು ಉದುರಿ, ಮೇ–ಜೂನ್‌ನಲ್ಲಿ ಹೊಸ ಚಿಗುರು ಬಂದು, ಜೂನ್–ಆಗಸ್ಟ್ ತಿಂಗಳಲ್ಲಿ ಸುವಾಸಿತ ಹಳದಿಯ ಹೂಗೊಂಚಲುಗಳಿಂದ ಕೂಡಿರುತ್ತವೆ. ಜನವರಿ–ಮಾರ್ಚ್ ತಿಂಗಳಲ್ಲಿ ಕಾಯಿ ಮಾಗುತ್ತದೆ. ಸಸಿಯು ತಕ್ಕಮಟ್ಟಿಗೆ ಬಿಸಿಲನ್ನು ಅಪೇಕ್ಷಿಸುತ್ತದೆ. ಕತ್ತರಿಸಿದಾಗ ಚೆನ್ನಾಗಿ ಚಿಗುರುತ್ತದೆ. ಸ್ವಾಭಾವಿಕ ಪುನರುತ್ಪತ್ತಿ ಸಾಧ್ಯವಿದ್ದರೂ, ಎಳೆಯ ಸಸಿಗಳನ್ನು ಜಾನುವಾರು ತುಳಿತ, ಬೆಂಕಿ ಕಾಟದಿಂದ ಕಾಪಾಡಬೇಕು.

ಪ್ರತಿಕ್ರಿಯಿಸಿ: feedback@sudha.co.in